**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ.808/2023</u>**

**ದಿನಾಂಕಃ 01.06.2023**

**<u>ಪಿರ್ಯಾದುದಾರರು</u> ಃ** ಸರ್ಕಾರದ ಪರವಾಗಿ ಬೀರೂರು ಪೊಲೀಸರಿಂದ

**-ವಿರುದ್ಧ-**

**<u>ಆರೋಪಿ/ತರು</u> ಃ** ಶ್ರೀ ವಸಂತ ಕುಮಾರ
ಬಿನ್ ಚಂದ್ರಪ್ಪ,
33 ವರ್ಷ, ವ್ಯವಸಾಯ ,
ವಾಸಃ ಗಡುಗನಹಳ್ಳಿ ಗ್ರಾಮ,
ಕಡೂರು ತಾಲ್ಲೂಕು.

**<u>ಃಆಪಾದನೆಃ</u>**

ದಿನಾಂಕ 24.10.2022 ರಂದು ಮಧ್ಯಾಹ್ಹ 1-45 ರ ಸಮಯದಲ್ಲಿ ಬೀರೂರು ಠಾಣಾ ವ್ಯಾಪ್ತಿಯ, ಕಾಮನಕೆರೆ ಗ್ರಾಮದ ಶುದ್ದಗಂಗಾ ನೀರಿನ ಘಟಕದ ಎದುರಿನ ಎನ್.ಹೆಚ್.173 ರಸ್ತೆಯಲ್ಲಿ ಆರೋಪಿಯಾದ ನೀವು ಚಾಲನೆ ಮಾಡಿಕೊಂಡು ಬರುತ್ತಿದ್ದ ನಿಮ್ಮ ಬೈಕ್ ನಂ.ಕೆಎ-66/ಜೆ-3496 ಬಜಾಜಾ ಪ್ಲಾಟಿನ್ ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಹಿರೇನಲ್ಲೂರು ಕಡೆಯಿಂದ ಕಡೂರು ಕಡೆಗೆ ಚಾಲನೆ ಮಾಡಿಕೊಂಡು ಬಂದು, ಕಡೂರು ಕಡೆಯಿಂದ ಹಿರೇನಲ್ಲೂರು ಕಡೆಗೆ ಹೋಗುತ್ತಿದ್ದ ಬೈಕ್ ನಂ.ಕೆಎ-66/ಎಲ್-0895 ಹೊಂಡಾ ಶೈನ್ ಬೈಕನ್ನು ಮೃತ ಸಂಜು ರವರು ರಸ್ತೆಯ ಎಡಭಾಗದಲ್ಲಿ ಚಾಲನೆ ಮಾಡಿಕೊಂಡು ಹೋಗುತ್ತಿದ್ದಾಗ ಮೃತ ಸಂಜು ರವರ ಬೈಕಿಗೆ ಎದುರುಗಡೆಯಿಂದ ಡಿಕ್ಕಿಪಡಿಸಿರುತ್ತೀರಿ. ಆದ್ದರಿಂದ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಆರೋಪಿಯಾದ ನೀವು ಮೃತ ಸಂಜು ರವರ ಬೈಕಿಗೆ ಡಿಕ್ಕಿ ಹೊಡೆಸಿದ ಪರಿಣಾಮ ಬೈಕುಗಳು ಜಕ್ಕಂ ಆಗಿ, ಇಬ್ಬರು ಬೈಕ್ ಚಾಲಕರು ರಸ್ತೆಯ ಮೇಲೆ ಬಿದ್ದಿದ್ದು, ಅಲ್ಲೇ ಇದ್ದ ಚಾಸಾ-2 ರವರು ಮೃತ ಸಂಜುವಿನ ತಲೆಯ ಹಿಂಭಾಗಕ್ಕೆ ತೀವ್ರವಾದ ಪೆಟ್ಟು ಬಿದ್ದು ಕಿವಿಯಲ್ಲಿ ಮೂಗಿನಲ್ಲಿ ರಕ್ತಸ್ರಾವವಾಗುತ್ತಿದ್ದು ಕೂಡಲೇ ಆಂಬ್ಯುಲೇನ್ಸ್ ನಲ್ಲಿ ಕಡೂರು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದಾಗ ಮಾರ್ಗ ಮಧ್ಯೆ ಮೃತಪಡಲು ನಿಮ್ಮ ಅಜಾಗರೂಕತೆಯ ಚಾಲನೆಯ ಕಾರಣವಾಗಿರುತ್ತದೆ. ಆದ್ದರಿಂದ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 304(ಎ)ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಪ್ರಶ್ನೆ-1ಃ ನಿಮಗೆ ಈಗ ಓದಿ ಹೇಳಲಾದ ಆರೋಪವು ತಿಳಿಯಿತೆ?

ಉತ್ತರಃ ಹೌದು

ಪ್ರಶ್ನೆ-2ಃ ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿ ಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉತ್ತರಃ ಇಲ್ಲ, ವಿಚಾರಣೆಯಾಗಬೇಕು.

ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಸಹಿ/-

(ಸವಿತರಾಣಿ ಹೆಚ್.ವಿ)
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು.

ಆರೋಪಿ ಸಹಿಃ